# ಕವಿತೆ



ರೂಪ ಹಾಸನ

ಕಲೆ: ನಂಜುಂಡಸ್ವಾಮಿ

## ಹನಿಯೊಂದು ತೊಟ್ಟಿಕ್ಕುವವರೆಗೆ...




ಕತೆಗಳಾಗಲೊಲ್ಲದ ಕವಿತೆಗಳಿವು
ತಮ್ಮದೇ ಕುರುಹುಗಳ ಅಳಿಸಿ
ಆವಿಯಾಗಿ ಮತ್ತೆ ಮರು ಹುಟ್ಟುತ್ತವೆ
ಸುಗಂಧ ನೋಟ ಇಂಚರವಾಗಿ

ಕಣ್ಣಿಗೆ ಕಾಣದ ಹೂವಿನ ಗಂಧ
ಹಿಡಿಗೂ ಸಿಕ್ಕದ ನೋಟ
ಆಲಿಕೆಗೂ ದಕ್ಕದ ಇಂಚರ
ಸದ್ದಿಲ್ಲದೆ ಮೊಳೆಯುತ್ತವೆ ಉಸಿರುಸಿರಲಿ

ಹಾಡು, ಮೌನ, ಏಕಾಂತ,
ಸಾಯುತ್ತವೆ ಎಲ್ಲವೂ ಕರಗಿ
ಹುಟ್ಟುತ್ತವೆ ಹೊಸರೂಪವಾಗಿ
ಒಂದಿನಿತೂ ಸಾಕ್ಷ್ಯ ಉಳಿಸದೇ

ಹೇಳಿದ್ದೆಲ್ಲವೂ ಮುಗಿದೇಹೋಗಿದೆ ಎಂದು
ಎಂದೂ ಗುಮಾನಿಬರದಂತೆ ಹುಟ್ಟುತ್ತದೆ
ಹೇಳಿದಷ್ಟೂ ಮತ್ತೆ ಮತ್ತೆ ಹೇಳುತ್ತಲೇ
ಇರಬೇಕೆಂಬಂತೆ ಈ ಸಾವಿಲ್ಲದ ಕವಿತೆ

ಕವಿತೆಯೂ ಬೆಳಕೂ ಬೇಕೆಂದರೆ...
ಈ ಬೆತ್ತಲೆ ನಿಶಿತ ಕತ್ತಲು ಆವರಿಸಿ,
ನಿಧಾನಕ್ಕೆ ಕರಗಿ ಕರಗಿ ಸಾಯುವವರೆಗೆ
ಕಾಯಬೇಕು ಹನಿಯೊಂದು ತೊಟ್ಟಿಕ್ಕುವವರೆಗೆ...

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68